ಓದಿದರೆ ನನಗೆ ತಲೆಬುಡ ಅರ್ಥವಾಗದು. ಬಂಡಾಯದ ಯುಗ ಬಾರದೆ ಹೋಗಿದ್ದರೆ ನನ್ನಂಥವರೂ ಕತೆಗಾರರಾಗುವ ಅವಕಾಶ ಬರುತ್ತಿರಲಿಲ್ಲವೆನಿಸುತ್ತದೆ ಈಗ.

ಒಬ್ಬ ಕತೆಗಾರ ಕತೆಗಳನ್ನು ಬರೆಯುತ್ತಾನೆಂದರೆ ಅವನು ವಸ್ತುವಿಗಾಗಿ ಮನಸ್ಸಿನಲ್ಲೇ ತನ್ನನ್ನು ತಾನು ಸತತವಾಗಿ ಅನ್ವೇಷಣೆಗೆ ಒಳಪಡಿಸಿಕೊಳ್ಳುತ್ತಲೇ ಇರಬೇಕಾಗುತ್ತದೆ. ಆರಿಸಿಕೊಳ್ಳುವ ವಸ್ತು ಕೂಡ ಅವನ ಮನೋಸ್ಥಿತಿಯನ್ನೇ ಅವಲಂಬಿಸಿರುತ್ತದೆ. ಮಡಿ ಲೇಖಕ, ಮೈಲಿಗೆ ಲೇಖಕರೆಂದೂ ವಿಂಗಡಿಸಬಹುದೆನ್ನಿ. ಮಡೆಸ್ನಾನವನ್ನು ಬೆಂಬಲಿಸುವ ಕತೆಗಾರರಿರುವಂತೆ, ಖಂಡಿಸಿ ಕಥಾ ಸ್ವರೂಪ ಕೊಡುವ ಮೂಲಕ ಮೌಢ್ಯ ಕಂದಾಚಾರಗಳನ್ನು ಓದುಗರಿಗೆ ಮನದಟ್ಟು ಮಾಡುವ ಉಮೇದು ಕೂಡ ಆಯಾ ಕತೆಗಾರನ ಅಂತರಂಗದ ಅಭಿವ್ಯಕ್ತಿಯೇ ಆಗಿರುತ್ತದೆ. ಈವತ್ತು ಹೆಚ್ಚಾಗಿ ಮೈಲಿಗೆ ಲೇಖಕರ ಅಗತ್ಯವಿದೆ. ಗೋಹತ್ಯೆ ನಿಷೇಧವನ್ನು ಬೆಂಬಲಿಸಿ ಗೋವಿನಲ್ಲೇ ದೇವರನ್ನು ಕಾಣುವ, ಆ ಮೂಲಕ ದಲಿತ, ಅಲ್ಪಸಂಖ್ಯಾತರನ್ನು ಬೆದರಿಸುವ, ಕಾನೂನಿನ ಅಡಿ ಸಿಲುಕಿಸುವ ಹುನ್ನಾರವನ್ನೇ ಬೆಂಬಲಿಸಿ ಕತೆ, ಲೇಖನ ಬರೆವವರುಂಟು. ಉಡುಪು, ತಿನ್ನುವ ಆಹಾರದ ಬಗೆಗಿನ ನಿಷೇಧಗಳು ವಿಭಿನ್ನ ಜಾತಿ, ಸಂಸ್ಕೃತಿ, ಸಮುದಾಯಗಳಿರುವ ಸಮಾಜದಲ್ಲಿ ಎಂತಹ ಬಿರುಕು ಮತ್ಸರ ಅನುಮಾನ, ಅವಮಾನದ ಹಗೆಯ ಹೊಗೆಯನ್ನು ಗಾಢವಾಗಿಸಿ ಕೋಮು ಸೌಹಾರ್ದತೆಗೆ ಧಕ್ಕೆ ತರುತ್ತದೆಂಬುದನ್ನು ನಿರೂಪಿಸುವುದು ಕೂಡ ಆಯಾ ಲೇಖಕನ ಸಾಮಾಜಿಕ ಜವಾಬ್ದಾರಿಯೇ. 'ಲಾಳಾಸಾಬಿಯೂ ಕುರುಡಿ ಹಳ್ಳಿಯೂ' ಎಂಬ ನನ್ನದೊಂದು ಕತೆಯಲ್ಲಿ ಲಾಳಾಸಾಬಿ ದನಗಳ ಗೊರಸಿಗೆ ಲಾಳಾಬಡಿಯುವ, ಪಾತ್ರೆಗಳಿಗೆ ಕಲಾಯಿ ಹಾಕುವುದರ ಜೊತೆಗೆ ದನಗಳಿಗೆ 'ಮದ್ದು' ನೀಡುತ್ತಾ ಕುರುಡಿಹಳ್ಳಿಯ ಕಣ್ಣಾಗಿರುತ್ತಾನೆ. ಪೂಜಾರಿಯ ಮನೆಯಲ್ಲಿ ಕಾಯಿಲೆಯ ದನ ಒಂದು ಸತ್ತಿರುತ್ತದೆ. ಎರಡನೆ ದಿನವೂ ಅದನ್ನು ಕೊಂಡೊಯ್ಯುವವರಿಲ್ಲ. ಕಾನೂನಿಗೆ ಹೆದರಿ ಸಾಬರೂ ಅದನ್ನು ಮುಟ್ಟುವಂತಿಲ್ಲ; ದಲಿತರಿಗೂ ಸತ್ತ ದನ ಬೇಡ. ಅದರ ವಿಲೇವಾರಿ ಆಗದೆ ನಾತಾ ಹೊಡೆವ ದನವನ್ನು ಕೊಟ್ಟಿಗೆಯಲ್ಲಿಟ್ಟುಕೊಂಡ ಪೂಜಾರಿಯ ಗತಿ? ಬೇರೆ ಊರಿಗೆ ಲಾಳ ಹಾಕಲು ಹೋಗಿದ್ದ ಸಾಬಿ ಬರುತ್ತಾನೆ. ಅವನಲ್ಲಿ ಪೂಜಾರಿ ಮನೆಯವರು ಶರಣಾಗುತ್ತಾರೆ. ಕಾನೂನಿನ ದಿಗಿಲಿದ್ದರೂ ಸ್ನೇಹಕ್ಕೆ ಸೋತು ಆತ ಸತ್ತ ದನವನ್ನು ಮನೆಗೆ ಸಾಗಿಸುತ್ತಾನೆ. ಸ್ವಚ್ಛ ಮಾಡಿ ಚರ್ಮ ಸುಲಿಯುವಾಗಲೇ ಕುಂಕುಮಧಾರಿ ಹಳ್ಳಿಪಡ್ಡೆಗಳು ಗದ್ದಲವೆಬ್ಬಿಸಿ ಪೊಲೀಸರನ್ನು ಕರೆಸುತ್ತಾರೆ. ಸಾಬಿಯನ್ನು ಪೊಲೀಸರು ಹಿಗ್ಗಾಮುಗ್ಗಾ ಬಡಿದು ಬಂಧಿಸುವಾಗ ಸಾಬಿಯಿಂದ ಉಪಕೃತರಾದ ಹಳ್ಳಿಗರದ್ದು ದಿವ್ಯಮೌನ. ಸತ್ತ ಆಕಳನ್ನು ಬಳಸುತ್ತಿದ್ದೇನೆಂದು ಬೇಡಿದರೂ ಕೇಳುವವರಿಲ್ಲ. ಸತ್ತ ಆಕಳನ್ನು ನೀಡಿದ ಪೂಜಾರಿ ತನಗೂ ಪ್ರಕರಣಕ್ಕೂ ಸಂಬಂಧವಿಲ್ಲವೆಂಬಂತೆ ಮನೆ ಬಾಗಿಲು ಮುಚ್ಚಿಕೊಳ್ಳುತ್ತಾನೆ. ಸಾಬಿಯನ್ನು ಪೊಲೀಸರು ವ್ಯಾನ್ ಹತ್ತಿಸುತ್ತಾರೆ. ಇತ್ತೀಚೆಗೆ 'ಮಯೂರ'ದಲ್ಲಿ ಪ್ರಕಟವಾದ 'ದನಗಳು' ಅನ್ನುವ ಕತೆಯಲ್ಲಿ ಮಾರಾಟಕ್ಕೆಂದು ಸಾಗಿಸುತ್ತಿದ್ದ ದನಗಳನ್ನು ಗೋರಕ್ಷಕರು ಹಿಡಿದುತಂದು ಠಾಣೆಗೊಪ್ಪಿಸಿ ಹೋಗಿಬಿಡುತ್ತಾರೆ. ಐವತ್ತು ಅರವತ್ತು ದನಗಳನ್ನು ಅದರಲ್ಲೂ ಮುಪ್ಪಾದ ರೋಗಗ್ರಸ್ಥ ದನಗಳನ್ನು ನೋಡಿಕೊಳ್ಳುವ ಅನಿವಾರ್ಯತೆಗೆ ತುತ್ತಾದ ಇನ್‌ಸ್ಪೆಕ್ಟರ್ ಒಬ್ಬ, ಅವುಗಳನ್ನು ಬೇರೆಡೆ ಸಾಗು ಹಾಕಲು ನಡೆಸುವ ನಾನಾ ಪ್ರಯತ್ನ ಹಾಗೂ ಕಾನೂನಿನ ತೊಡಕುಗಳ ವ್ಯಂಗ್ಯ ವಿಡಂಬನೆ ಈ ಕತೆಯಾಗಿದೆ(ಇದೀಗ ಚಲನಚಿತ್ರವಾಗಲಿದೆ). ಕಾನೂನನ್ನು ಹೇಗೆ ದೊಡ್ಡಮಂದಿ ತಮಗೆ ಬೇಕಾದಂತೆ ಬಳಸಿಕೊಂಡು ದುರ್ಬಲರನ್ನು ಶೋಷಿಸುತ್ತಾರೆಂಬ